# ಕಾಲಿಗೆ ಗೆಜ್ಜೆ ಕಟ್ಟಿ

*ರಾಗ: ಆನಂದಭೈರವಿ     ತಾಳ: ಆದಿ*

**ಪಲ್ಲವಿ:**

**ಕಾಲಿಗೆ ಗೆಜ್ಜೆ ಕಟ್ಟಿ ಕೈಯಲ್ಲಿ ತಾಳ ಹಿಡಿವೆ**
**ಮೈಯೆಲ್ಲ ಮರೆತು ಕುಣಿವೆ ಕೃಷ್ಣ! ಕೃಷ್ಣ!**

**ಚರಣ:**

**ಬಂಧು ಬಳಗ ನೀನೆ ಅಂದೆ – ತಂದೆ ತಾಯಿ ನೀನೆ ಎಲ್ಲ**
**ಒಂದೂ ಅರಿಯೆ ದೇವನೇ – ಕೃಷ್ಣ! ಕೃಷ್ಣ! ...1**

**ಪ್ರಾಣವೆಲ್ಲ ನಿಂದೇ ಕೃಷ್ಣ – ನನ್ನ ಆಣೆ ಎಂದೆ ಕೃಷ್ಣ**
**ನಿನ್ನ ಕಾಣ ಬಂದೆ ಕೃಷ್ಣ – ಕೃಷ್ಣಾ! ಕೃಷ್ಣಾ! ...2**

**ಸತ್ತು ಹುಟ್ಟಿ ಬಂದೆ ಕೃಷ್ಣ – ಮತ್ತೆ ಹುಟ್ಟಲಾರೆ ಕೃಷ್ಣ**
**ಜಯದ ಕೂಗು ಕೂಗಿಕೊಂಡೆ – ಕೃಷ್ಣ! ಕೃಷ್ಣ! ...3**